ಮೂಲ ದಾವಾ ಸಂಖ್ಯೆ. 92/2023 ಪಿ ಡಬ್ಲ್ಯೂ 1

(ದಿನಾಂಕ 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಜಿ ಎನ್ ವಕೀಲರಿಂದಃ-

ದಾವಾ ಆಸ್ತಿಗಳು ಮೂಲತಹ ನನ್ನ ತಾತನವರಾದ ಯಂಕಪ್ಪ ಇವರಿಗೆ ಸೇರಿದ್ದು ಇರುತ್ತವೆ. ಯಂಕಪ್ಪ ಇವರಿಂದ ನನ್ನ ತಂದೆಗೆ ದಾವಾ ಆಸ್ತಿಗಳು ಕೋರ್ಟ ಆದೇಶದ ಮೂಲಕ ಬಂದಿರುತ್ತವೆ. ಸದರಿ ದಾವಾ ನಂ ನನಗೆ ಗೊತ್ತಿಲ್ಲ ಆದರೆ ಸದರಿ ದಾವೆಯ ಸನ್ 2005 ರಲ್ಲಿ ಡಿಕ್ರಿ ಆಗಿರುತ್ತದೆ. ಸದರಿ ದಾವೆಯನ್ನು ನನ್ನ ತಂದೆಯವರು ಕುಂಬಾರ ಹನುಮಂತಪ್ಪ ಮತ್ತು ಅವರ ಹೆಂಡತಿ ಮಕ್ಕಳ ಮೇಲೆ ದಾಖಲಿಸಿದ್ದು ಇರುತ್ತದೆ. ಕುಂಬಾರ ಹನುಮಂತಪ್ಪ ಇವರ ಮಕ್ಕಳ ಪೈಕಿ 1ನೇ ಪ್ರತಿವಾದಿಯು ಸಹ ಒಬ್ಬರು ಎಂದರೆ ಸರಿ. 1 ನೇ ಪ್ರತಿವಾದಿ ಶಿವಪ್ಪ ಇವರು ನನ್ನ ತಂದೆ ದ್ಯಾಮಪ್ಪ ಇವರ ವಿರುದ್ಧ ಮಾನ್ಯ ಹೊಸಪೇಟಿ ನ್ಯಾಯಾಲಯದಲ್ಲಿ ಓಎಸ್ ನಂ 93/2011 ದಾವೆಯನ್ನು ದಾಖಲಿಸಿದ್ದು ಇತ್ತು ಈ ವಿಚಾರ ನಿಮಗೆ ಗೊತ್ತ ಎಂದರೆ ಇಲ್ಲ. ಸದರಿ ದಾವೆಯಲ್ಲಿ 1ನೇ ಪ್ರತಿವಾದಿಯ ಪರ ಡಿಕ್ರಿ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಓ ಎಸ್ ನಂ 93/2011 ರ ದಾವೆಯಲ್ಲಿಯ ಹನುಮಂತಪ್ಪ ಇವರ ಸ್ವತ್ತುಗಳು ಮತ್ತು ಪ್ರಸ್ತುತ ದಾವಾ ಆಸ್ತಿಗಳನ್ನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವೇ ಹನುಮಂತಪ್ಪ ಇವರ ಜಮೀನಿನಲ್ಲಿ ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಅಳತೆಗೆ ಸಲ್ಲಿಸಿದ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1ನೇ ಪ್ರತಿವಾದಿಯು ತನ್ನ ತಂದೆಯ ಪಾಲಿನ ಆಸ್ತಿಯಲ್ಲಿ ಸ್ವಾದೀನದಲ್ಲಿದ್ದು ನಾವೇ 1ನೇ ಪ್ರತಿವಾದಿಯ ಆಸ್ತಿಗಳಲ್ಲಿ ಒತ್ತುವರಿ ಮಾಡಿ ಅವರ ವಿರುದ್ದ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗಳ ನಮ್ಮ ಸ್ವಾದೀನಕ್ಕೆ ತೊಂದರೆ ಕೊಟ್ಟಿರುತ್ತಾರೆ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ ನಂ 50/1997 ರ ಆದೇಶದಂತೆ ಹನುಮಂತಪ್ಪ ಇವರ ಹಿಸೆಕ್ಕೆ ಬಂದ ಸ್ವತ್ತುಗಳ ವಿಸ್ತೀರ್ಣವನ್ನು ಪಹಣಿ ದಾಖಲೆಯಲ್ಲಿ ದಾಖಲುಪಡಿಸಿಕೊಡಲು ನಾವು ವಿಫಲವಾಗಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂ 102/ಡಿ ಜಮೀನಿನ ವಿಸ್ತೀರ್ಣ ಎಷ್ಟು ಇದೆ ಅಂತಾ ನಿಖರವಾಗಿ ನನಗೆ ಹೇಳಲು ಬರುವುದಿಲ್ಲ ಅದು ಅಂದಾಜು 50 ಸೆಂಟ್ಸ ಇರಬಹುದು. ಸರ್ವೇ ನಂ 102/ಡಿ ಮೂಲತಹ 94 ಸೆಂಟ್ಸ ಇದೆ ನಾವು 47 ಸೆಂಟ್ಸ ಜಮೀನನ್ನುನಮ್ಮ ಹೆಸರಿಗೆ ಮಾಡಿಕೊಂಡು ಉಳಿದ ಸ್ವತ್ತನ್ನು ಹನುಮಂತಪ್ಪ ಇವರ ಹೆಸರಿಗೆ ದಾಖಲು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದ ಆದೇಶದಂತೆ ಮಾಡಿಸಿಕೊಂಡಿರುತ್ತೇವೆ ಎನ್ನುತ್ತಾರೆ.

ನ್ಯಾಯಾಲಯದ ಆದೇಶದಂತೆ ನಮ್ಮ ತಂದೆಗೆ ಎಷ್ಟು ಆಸ್ತಿಗಳು ಬಂದಿರುತ್ತವೆ ಎನ್ನುವುದು ನನಗೆ ಗೊತ್ತು. ನಮ್ಮ ತಂದೆಯವರಿಗೆ ಬಂದಿರುವಂತಹ ಮನೆ ಜಾಗವನ್ನು ನಾವು ಬೇರೆದವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಆ ವಿಚಾರವಾಗಿ 1 ನೇ ಪ್ರತಿವಾದಿಯು ಬೆಣಕಲ್ಲು ಗ್ರಾಮ ಪಂಚಾಯಿತಿಗೆ ತಕರಾರು ನೀಡಿರುತ್ತಾರೆ ಎಂದರೆ ಸರಿ. ನಂತರ ನಮ್ಮಿಂದ ಆಸ್ತಿ ಖರೀದಿ ಪಡೆದ ವ್ಯಕ್ತಿ ನಮಗೆ ಆಸ್ತಿ ಬೇಡ ನಮ್ಮ ಹಣ ನಮಗೆ ವಾಪಸು ಕೊಡಿ ಅಂತಾ ಹೇಳಿರುತ್ತಾನೆ ಆ ಕಾರಣದಿಂದ 1 ನೇ ಪ್ರತಿವಾದಿಯ ಮೇಲೆ ಒತ್ತಡ ತರಲು ಅವನ ವಿರುದ್ದ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ